4. ಉತ್ತರಹಳ್ಳಿ ಕಾಲೋನಿ
5. ಸಿಂದಿಗೆರೆ
6. ಕಳಸೇಪುರ
7. ದೇವೇಗೌಡನಹಳ್ಳಿ
8. ಬಿಳೀಕಲ್ಲುಹಳ್ಳಿ
9. ಮಕಮೇಲನಹಳ್ಳಿ
10. ಶ್ರೀನಿವಾಸಪುರ
11. ಪಾಡುಮನೆ
12. ಗಾಣದಾಳು
13. ಲಕ್ಕಮ್ಮನಹಳ್ಳಿ
14. ಪೀರೇಗಜ

ಬೀರೂರು ಕ್ಷೇತ್ರ - ತರೀಕೆರೆ ಭಾಗ

1. ದೊಡ್ಡಸಿಂಗೇನಹಳ್ಳಿ
2. ಕರುಖಾನ್‌ಮಟ್ಟಿ ಎಸ್ಟೇಟ್
3. ಹಳೇಗಂಗೂರು
4. ಮಾಗಬೈಲು
5. ನಂದಿಬಟ್ಟಲು ಕಾಲೋನಿ (ಗಾಂಧಿನಗರ)
6. ನಂದಿಬಟ್ಟಲು

ಶಿಂಗಟಾಲೂರು ಯೋಜನೆ

752(206) ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಿಂಗಟಾಲೂರು (ಹುಲಿಗುಡ್ಡ ಬ್ಯಾರೇಜ್) ಯೋಜನೆಯ ಅಂದಾಜು ವೆಚ್ಚ ಎಷ್ಟು?

ಆ) ಇದರ ನಿರ್ಮಾಣದಿಂದ ಎಷ್ಟು ಎಕರೆಗೆ ನೀರಾವರಿಯಾಗುತ್ತದೆ?

ಇ) ಅದರಲ್ಲಿ ಮುಂಡರಗಿ ಮತ್ತು ಗದಗ ತಾಲ್ಲೂಕುಗಳಿಗೆ ಎಷ್ಟು ಎಕರೆ ನೀರಾವರಿಯಾಗುತ್ತದೆ?

ಈ) ಬ್ಯಾರೇಜ್ ನಿರ್ಮಾಣ ಕಾರ್ಯ ಮುಗಿದು ರೈತರಿಗೆ ನೀರಾವರಿ ಒದಗಿಸಲು ಕಾಲ ಮಿತಿ ಹಾಕಲಾಗಿದೆಯೇ? ವಿವರ ನೀಡುವುದು.

ಉ) ಕಳೆದ ಎರಡೂವರೆ ವರ್ಷಗಳಲ್ಲಿ ಈ ಯೋಜನೆಗೆ ಖರ್ಚಾದ ಹಣವೆಷ್ಟು? ಮತ್ತು ಯೋಜನೆಯ ಪ್ರಗತಿ ವಿವರ ನೀಡುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ಸಿಂಗಟಾಲೂರು ಹುಲಿಗುಡ್ಡ ಏತ ಯೋಜನೆಯ ಪರಿಷ್ಕೃತ ಅಂದಾಜು ವೆಚ್ಚ ರೂ. 595.00 ಕೋಟಿ ರೂ.ಗಳು.

ಆ) ಇದರ ನಿರ್ಮಾಣದಿಂದ 1,67,000 ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರೆಯುತ್ತದೆ.

ಇ) ಸದರಿ ಯೋಜನೆಯಿಂದ ಅನುಕ್ರಮವಾಗಿ ಮುಂಡರಗಿ ತಾಲ್ಲೂಕಿನ 49,100 ಎಕರೆ ಮತ್ತು ಗದಗ ತಾಲ್ಲೂಕಿನ 40,900 ಎಕರೆ ಭೂಮಿಗೆ ನೀರು ಒದಗಿಸಲು ಉದ್ದೇಶಿಸಿದೆ.

ಈ) 10ನೇ ಪಂಚವಾರ್ಷಿಕ ಯೋಜನೆಗೆ ಸಲ್ಲಿಸಲಾದ ಪ್ರಸ್ತಾವನೆಯಂತೆ ಈ ಯೋಜನೆಯನ್ನು 2005ನೇ ಸಾಲಿನಲ್ಲಿ ರೈತರಿಗೆ ಪೂರ್ಣಪ್ರಮಾಣದ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿದೆ.

ಉ) ಕಳೆದ ಎರಡೂವರೆ ವರ್ಷಗಳಲ್ಲಿ ಈ ಯೋಜನೆಗೆ ರೂ. 17.15 ಕೋಟಿ ಖರ್ಚಾಗಿರುತ್ತದೆ. ಬ್ಯಾರೇಜ್ ತಳಪಾಯದ ಅಗೆತದ ಕೆಲಸ ಶೇಕಡಾ 70ರಷ್ಟು ಮತ್ತು ಕಾಂಕ್ರೀಟ್ ಕೆಲಸವು ಶೇಕಡಾ 15 ರಷ್ಟು ಆಗಿರುತ್ತದೆ. ಬಲದಂಡೆಯ ಇಂಟೇಕ್ ಕಾಲುವೆ ಮತ್ತು ಬಲದಂಡೆಯ 10 ಕಿ.ಮೀ. ಕಾಲುವೆ ಕಾಮಗಾರಿಗಳು ಮುಗಿಯುವ ಹಂತದಲ್ಲಿದೆ. ಎಲ್ಲಾ ಕಾಲುವೆ ಕೆಲಸಗಳ ಸರ್ವೆ ಕಾರ್ಯವನ್ನು ಖಾಸಗಿ ಕನ್ಸಲ್‌ಟೆಂಟ್ಸ್ ಗಳಿಗೆ ವಹಿಸಿದ್ದು ಇದು ಪ್ರಗತಿಯಲ್ಲಿರುತ್ತದೆ.

ರಾಜ್ಯದಲ್ಲಿರುವ ಮಹಿಳಾ ಸ್ವ ಸಹಾಯ ಗುಂಪುಗಳು

753(209) ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಮಹಿಳಾ ಸ್ವಸಹಾಯ ಗುಂಪುಗಳು ಎಷ್ಟು? ಮತ್ತು ಅವರು ಸಂಗ್ರಹಿಸಿರುವ ಹಣವೆಷ್ಟು? ತಾಲ್ಲೂಕುವಾರು ವಿವರ ನೀಡುವುದು.

ಆ) ಸದರಿ ಗುಂಪುಗಳಿಗೆ ಸರ್ಕಾರದಿಂದ ಮಾಡಿದ ಸಹಾಯದ ವಿವರ ನೀಡುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಸ್ತ್ರೀಶಕ್ತಿ ಯೋಜನೆಯಡಿ ಒಟ್ಟು 75660 ಸ್ವಸಹಾಯ ಗುಂಪುಗಳು ರಚನೆಯಾಗಿರುತ್ತವೆ. ಈ ಗುಂಪುಗಳು ಜೂನ್ 2002ರ ಅಂತ್ಯದವರೆಗೆ ಒಟ್ಟು 7924.82 ಲಕ್ಷ ರೂ.ಗಳನ್ನು ಉಳಿತಾಯ ಮಾಡಿರುತ್ತವೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಅ. ರಚನೆಯಾದ ಎಲ್ಲಾ ಸ್ತ್ರೀಶಕ್ತಿ ಗುಂಪುಗಳಿಗೆ ಪ್ರತಿ ಗುಂಪಿಗೆ 500/- ರೂ. ಮೌಲ್ಯದ ರಿಜಿಸ್ಟರ್ಸ್‌ಗಳು, ಪಾಸ್‌ಬುಕ್‌ಗಳು ಮತ್ತು ಝಿಂಕ್ ಟ್ರಂಕ್‌ಗಳನ್ನೊಳಗೊಂಡ ಕಿಟ್ ಮೆಟೀರಿಯಲ್ಸ್‌ಗಳನ್ನು ಒದಗಿಸಲಾಗಿದೆ.